# ಸಮನ್ವಯ ಮತ್ತು ಸುರಕ್ಷಿತ ಶಾಲಾ ಸಂಸ್ಕೃತಿಯನ್ನು ರೂಪಿಸುವುದು

ಪ್ರಣಾಲೀ ಶರ್ಮ

'ನನ್ನನ್ನು ಪಠ್ಯೇತರ ಚಟುವಟಿಕೆಗಳಿಂದ ಹೊರಗಿಡಲಾಗಿತ್ತು. ಅಂತಹ ಸಂದರ್ಭಗಳಲ್ಲಿ ನಾನು ವೀಕ್ಷಕನಂತೆ ಮೂಲೆಗಳಲ್ಲಿ ನಿಂತುಕೊಂಡಿರುತ್ತಿದ್ದೆ. ಶಾಲೆಯ ವಾರ್ಷಿಕೋತ್ಸವದ ಸಂದರ್ಭ ನಾಟಕದ ಪೂರ್ವಾಭ್ಯಾಸದ ವೇಳೆ ನಾನೂ ಸಹ ಒಂದು ಪಾತ್ರಕ್ಕಾಗಿ ಹಾತೊರೆಯುತ್ತಿದ್ದೆ. ಆದರೆ ನಾನು ಯಾವಾಗಲೂ ಬಾಗಿಲ ಹೊರಗೆ ನಿಲ್ಲಬೇಕಿತ್ತು. ತಮ್ಮನ್ನು ದೇವರ ವಂಶದವರೆಂದು ಗುರುತಿಸಿಕೊಳ್ಳುವವರಿಗೆ ಬಾಗಿಲ ಹೊರಗಡೆ ನಿಲ್ಲುವುದರ ವೇದನೆ ಅರ್ಥವಾಗದು.' ಮೇಲಿನ ಮಾತನ್ನು 'ಜೂಥನ್: ಎ ದಲಿತ್ ಲೈಫ್ (1997)' (Joothan: A Dalit's Life) ಎನ್ನುವ ಆತ್ಮಚರಿತ್ರೆಯಿಂದ ತೆಗೆದುಕೊಳ್ಳಲಾಗಿದೆ. ಇದು 1950ರ ವೇಳೆಗೆ ಓಂ ಪ್ರಕಾಶ್‌ವಾಲ್ಮೀಕಿ ಅವರು ಒಬ್ಬ ಅಸ್ಪೃಶ್ಯನಾಗಿ ಹುಟ್ಟಿ ಬೆಳೆದರು ಎಂಬುದನ್ನು ವರ್ಣಿಸುತ್ತದೆ. ಲೇಖಕರು ಇಲ್ಲಿ, ಶಾಲಾ ಕಾರ್ಯಕ್ರಮದಿಂದ ತನ್ನನ್ನು ಹೇಗೆ ಹೊರಗಿಡಲಾಯಿತು ಎಂಬುದರ ಕುರಿತ ತನ್ನ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ತನ್ನಂತಹ ಮಕ್ಕಳಿಗೆ ಅಸುರಕ್ಷಿತ ಮತ್ತು ಅನಪೇಕ್ಷಿತ ಪರಿಸರವನ್ನು ಸೃಷ್ಟಿಸಿದ ಅಭ್ಯಾಸಗಳ ಕಾರಣ ಅವರು ಅನುಭವಿಸಿದ ಯಾತನೆಗಳನ್ನು ಇದು ವರ್ಣಿಸುತ್ತದೆ. ಮಗುವಿನ ಸಾಮರ್ಥ್ಯಗಳು, ಜಾತಿ, ಲಿಂಗ, ಭಾಷೆ, ಸಮುದಾಯ ಅಥವಾ ಧರ್ಮವನ್ನು ಆಧರಿಸಿ ನಡೆಸುವ ತಾರತಮ್ಯದ ಶಾಲಾ ಅಭ್ಯಾಸಗಳು ದುರ್ಬಲ ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳು ಮತ್ತು ದುರ್ಬಲ ಶೈಕ್ಷಣಿಕ ಸಾಧನೆಗೆ ಕಾರಣವಾಗುತ್ತವೆ. ದೈಹಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಅಸುರಕ್ಷಿತ ಭಾವನೆ ಉಂಟಾದರೆ ಅದು ಒಬ್ಬ ವ್ಯಕ್ತಿಯ ಕೇಳುವ, ಸ್ಪಷ್ಟವಾಗಿ ಯೋಚಿಸುವ ಮತ್ತು ಕಲಿಯುವ ಸಾಮರ್ಥ್ಯಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ ಎಂಬುದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ನಾವು ಸುರಕ್ಷಿತ ಭಾವನೆಯನ್ನು ಹೊಂದಿದ್ದೇವೆಯೇ ಅಥವಾ ಇಲ್ಲವೇ ಎನ್ನುವುದು ನಮ್ಮ ಭಾವನಾತ್ಮಕ ಅನುಭವಗಳ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಮುಂದೆ ಅದು ನಮ್ಮ ಸಾಮಾಜಿಕ ಅನುಭವಗಳ ಮೇಲೆಯೂ ಪ್ರಭಾವ ಬೀರುತ್ತದೆ.

## ಒಂದು ಸಮನ್ವಯ ಮತ್ತು ಸುರಕ್ಷಿತ ಶಾಲಾ ಸಂಸ್ಕೃತಿ

ನಿರಂತರವಾಗಿ ವಿಕಸನಗೊಳ್ಳುತ್ತಿರುವ 'ಸಮನ್ವಯ ಶಿಕ್ಷಣ' (inclusive education) ಎನ್ನುವ ಪರಿಕಲ್ಪನೆ ನಮಗೆ ಪರಿಚಿತವೇ ಇದೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಉದ್ದೇಶ ಹೊಂದಿರುವ ದೊಡ್ಡಮಟ್ಟದ ಕಾರ್ಯಕ್ರಮಗಳು (ಸರ್ವ ಶಿಕ್ಷಣ ಅಭಿಯಾನ ಇತ್ಯಾದಿ) ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ (Right of Children to Free and Compulsory Education Act (RTE) 2009 ಮುಂತಾದವುಗಳ ಜಾರಿಯೊಂದಿಗೆ, ನಮ್ಮ ಶಾಲೆಗಳು, ವಿಸ್ತೃತ ಸಮಾಜೋ-ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳ ಮಕ್ಕಳನ್ನು ಹೊಂದುವ ಮೂಲಕ ಬಹು ಜನಾಂಗೀಯ ಶಾಲೆಗಳಾಗಿ ರೂಪುಗೊಳ್ಳುತ್ತಿವೆ. ಹೀಗಾಗಿ, ವಿಶೇಷ ಚೇತನರು, ಭಾಷಾ ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಸಾಮಾಜಿಕ ಮತ್ತು ಆರ್ಥಿಕ ಅನನುಕೂಲತೆಗೆ ಒಳಗಾದ ವರ್ಗಗಳ ಮಕ್ಕಳು ಮತ್ತು ಬಾಲಕಿಯರೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿ ಕೊಡುವುದಕ್ಕಾಗಿ ಶಾಲಾ ಸಂಸ್ಕೃತಿ, ನೀತಿ ಮತ್ತು ಅಭ್ಯಾಸಗಳ ಪುನಾರಚನೆ ಮಾಡುವ ಅಗತ್ಯವಿದೆ (ಎನ್.ಸಿ.ಇ.ಆರ್.ಟಿ).

> ಸಮನ್ವಯ ಶಿಕ್ಷಣದ ಸಂಕುಚಿತ ಮತ್ತು ಯಾಂತ್ರಿಕ ದೃಷ್ಟಿಕೋನದಿಂದ, ವಿಶೇಷ ಚೇತನ ಮಕ್ಕಳ ಸೇರ್ಪಡೆ ಮಾತ್ರವಲ್ಲದೆ ದೇಶದಾದ್ಯಂತ ಹೊರಗಿಡುವಿಕೆಯ ವಿಸ್ತೃತ ಅಂಶಗಳನ್ನು ಪರಿಗಣಿಸುವ ಅಗತ್ಯವಿದೆ. ಸಮನ್ವಯ ಶಾಲೆಗಳು ವೈಯಕ್ತಿಕ ಭಿನ್ನತೆಗಳನ್ನು ಸರಿಪಡಿಸಬೇಕಾದ ಸಮಸ್ಯೆಗಳೆಂದು ಪರಿಗಣಿಸದ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯನ್ನು ಸಮೃದ್ಧಗೊಳಿಸಲು ಒದಗಿಬರುವ ಅವಕಾಶವೆಂದು ಪರಿಗಣಿಸುತ್ತವೆ. ಸಮನ್ವಯ ಶಿಕ್ಷಣ ಉದ್ದೇಶ, ಏಕರೂಪತೆಯನ್ನು ಪ್ರಶ್ನಿಸಿ ಮತ್ತು ಅದಕ್ಕೆ ಸವಾಲೊಡ್ಡಿ ಬಹುಸಂಸ್ಕೃತಿಗಳ ಸಮುದಾಯಗಳನ್ನು ಒಳಗೊಳ್ಳುವುದಾಗಿದೆ. ಏಕೆಂದರೆ, ಶಾಲಾ ಸಂಸ್ಕೃತಿಯು ಸುರಕ್ಷಿತ ಮತ್ತು ಸಮನ್ವಯವಾಗಿರಬೇಕೆಂದರೆ ಈ ನೀತಿಗಳು ಮತ್ತು ಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕಾದುದು ಅತ್ಯವಶ್ಯಕ.

ಶಾಲೆಗಳಲ್ಲಿ ಸುರಕ್ಷತೆ ಎಂದರೆ ಮಗುವಿಗೆ ಮುಂದೆ ಸಾಗುವುದಕ್ಕಾಗಿ ಸುರಕ್ಷಿತ ಪರಿಸರವನ್ನು ಕಲ್ಪಿಸುವುದು; ಅಂದರೆ ಕಲಿಕೆಯನ್ನು ಬೆಂಬಲಿಸುವ ಪರಿಸರವಾಗಿದೆ. ಅಂತಹ ಸುರಕ್ಷತಾ ಪ್ರಯತ್ನಗಳು, ಮಕ್ಕಳ ಯೋಗಕ್ಷೇಮವನ್ನು ಬಾಧಿಸುವ ಎಲ್ಲಾ ಅಪಾಯಗಳನ್ನು ಪರಿಗಣಿಸಬೇಕು. ಅದು ದೌರ್ಜನ್ಯ, ಹಿಂಸೆ, ಅಪಘಾತಗಳು, ಸಮಾಜೋ-ಭಾವನಾತ್ಮಕ ಸಮಸ್ಯೆಗಳು ಇತ್ಯಾದಿಗಳಿಂದ ರಕ್ಷಿಸುವುದನ್ನು ಒಳಗೊಂಡಿರಬೇಕು. ಶಾಲಾ ಪರಿಸರದಲ್ಲಿ ಯಾವುದೇ ಶಿಕ್ಷೆ, ಪೀಡನೆ, ಶೋಷಣೆ, ಬೆದರಿಕೆ, ಅಥವಾ ಯಾವುದೇ ಅನುಚಿತ ಭಾಷೆಯನ್ನು ಬಳಸದೆ ಶಾಲೆಯು


ಧನಾತ್ಮಕ ಪರಿಸರದಿಂದ ಕೂಡಿರಬೇಕು. ಮಕ್ಕಳು ಅಪಾಯದ ಭೀತಿಯನ್ನು ಎದುರಿಸಿದಾಗ ಅವರಿಗೆ ಕಲಿಕೆಯ ಮೇಲೆ ಗಮನ ನೀಡಲು ಆಗುವುದಿಲ್ಲ ಅಥವಾ ಅವರು ಶಾಲೆಗೆ ಬರುವುದನ್ನೇ ನಿಲ್ಲಿಸಬಹುದು.

## ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸುರಕ್ಷಿತ ಶಾಲೆಯನ್ನು ರೂಪಿಸುವುದು


ಇಂತಹ ವಾತಾವರಣವನ್ನು ಸೃಷ್ಟಿಸಬೇಕಾದರೆ, ಸುರಕ್ಷತೆ ಹಾಗೂ ಭದ್ರತೆಯು ಕಲಿಕೆಗೆ ಬೇಕಾಗುವ ಪೂರ್ವಾಪೇಕ್ಷಿತ ಅಂಶ ಎಂಬುದರ ಮೇಲೆ ಗಮನವಿಟ್ಟು, ಶಾಲೆಯೊಳಗೆ ಮೂಲಸೌಕರ್ಯ, ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆಗಳು ಮತ್ತು ಸಾಮಾಜಿಕ-ಭಾವನಾತ್ಮಕ ಚಾಲಕ ಶಕ್ತಿಗಳ ಕಡೆಗೆ ನಿರಂತರವಾಗಿ ಮತ್ತು ಸಮಗ್ರವಾಗಿ ಗಮನವನ್ನು ನೀಡಬೇಕು. ಶಾಲಾ ಆಡಳಿತವು ಶಿಕ್ಷಕರ ಮತ್ತು ಶಾಲಾ ಸಿಬ್ಬಂದಿಗಳ ವರ್ತನೆ, ಅವರ ವೃತ್ತಿಪರ ತರಬೇತಿ ಮತ್ತು ತರಗತಿಯ ಪರಿಣಾಮಕಾರಿ ನಿರ್ವಹಣೆಗೆ ಸ್ಪಷ್ಟ ಕಾರ್ಯವಿಧಾನಗಳನ್ನು ಹೊಂದಿರಬೇಕು. ಶಾಲೆಯಲ್ಲಿ ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸುರಕ್ಷಿತ ಪರಿಸರವನ್ನು ಉತ್ತೇಜಿಸಿದಲ್ಲಿ ಅದು ಮಕ್ಕಳಲ್ಲಿ ಕಲಿಯುವ, ಸ್ನೇಹವನ್ನು ರೂಪಿಸಿಕೊಳ್ಳುವ ಮತ್ತು ಆರೋಗ್ಯದಾಯಕ ಜೀವನವನ್ನು ಸಾಗಿಸುವ ಸಾಮರ್ಥ್ಯವನ್ನು ವೃದ್ಧಿಸುತ್ತದೆ.

ಶಾಲೆಯ ಸುರಕ್ಷತೆಯ ಯೋಜನೆಯು ಮುಖ್ಯವಾಗಿ ಮೂಲಸೌಕರ್ಯ, ಸಂಪನ್ಮೂಲಗಳ ಲಭ್ಯತೆ ಮುಂತಾದ ದೈಹಿಕ ಸುರಕ್ಷತೆಯ ಮೇಲೆ ಗಮನ ನೀಡುವುದನ್ನು ನಾವು ನೋಡಿದ್ದೇವೆ. ನಿಜವಾಗಿಯೂ ಪರಿಣಾಮಕಾರಿ ಎನಿಸುವ ಸಮಗ್ರ ಯೋಜನೆಯನ್ನು ರೂಪಿಸಬೇಕಾದರೆ, ಇಡೀ ಶಾಲಾ ವ್ಯವಸ್ಥೆಯನ್ನು ಒಳಗೊಳ್ಳುವ ಪ್ರಕ್ರಿಯೆಯ ಅಗತ್ಯವಿದೆ. ಶಿಕ್ಷಕರು, ವಿದ್ಯಾರ್ಥಿಗಳು, ಶಾಲಾ ಸಿಬ್ಬಂದಿ ಮತ್ತು ಪೋಷಕರು ಒಟ್ಟಿಗೆ ಕೆಲಸ ಮಾಡಬೇಕು. ತಾವು ಎಷ್ಟು ಸುರಕ್ಷಿತ ಭಾವನೆಯನ್ನು ಹೊಂದಿದ್ದೇವೆ ಎಂಬುದನ್ನು ಪರ್ಯಾಲೋಚಿಸಿ ತಮ್ಮ ಶಾಲೆಯು ಹೇಗಿರಬೇಕು ಎನ್ನುವ ದೂರದೃಷ್ಟಿಯನ್ನು ಸಂಘಟನಾತ್ಮಕವಾಗಿ ಅಭಿವೃದ್ಧಿಪಡಿಸಬೆಕು. ಧನಾತ್ಮಕ ವರ್ತನೆಯ ರೂಢಿ (positive behavioural System) ಹಾಗೂ ಚಿಂತನೆ ಮತ್ತು ಶಬ್ದಸಂಪತ್ತನ್ನು ರೂಪಿಸಬಲ್ಲಂತಹ ವಿಷಯಗಳನ್ನು ಅಭಿವೃದ್ಧಿ-ಪಡಿಸಬೇಕಾಗುತ್ತದೆ (ಡೆವಿನ್ ಮತ್ತು ಕೊಹೆನ್, 2007).

ಶಾಲೆಯನ್ನು ಸುರಕ್ಷಿತ ಮತ್ತು ಸಮನ್ವಯವಾಗಿಸಲು ಸಮಾಜ, ಕುಟುಂಬ, ಸಮುದಾಯ – ಹೀಗೆ ಅನೇಕ ಸಂಕೀರ್ಣ ಅಂಶಗಳ ಗಣಗಳು ಒಟ್ಟಿಗೆ ಬರುತ್ತವೆ. ಈ ಮೂರು ಸಂವಾದಾತ್ಮಕ ಅಂಶಗಳಲ್ಲದೆ ಶಾಲಾ ಪರಿಸರವು ಅತ್ಯಂತ ನಿರ್ಣಾಯಕ ಅಂಶವಾಗಿದೆ. ಇದು ನಿಯಮಗಳು, ಗುಪ್ತ ನಡವಳಿಕೆಗಳು, ವಿದ್ಯಾರ್ಥಿಗಳು ಮತ್ತು ವಯಸ್ಕರ ನಡುವಿನ ಸಂಬಂಧಗಳು ಇತ್ಯಾದಿಗಳನ್ನು ಒಳಗೊಂಡಿರುವ ಎಲ್ಲಾ ಕ್ಷೇತ್ರಗಳಲ್ಲಿ ಮಗುವಿನ ಆರೋಗ್ಯದಾಯಕ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತವೆ. ಒಂದನ್ನೊಂದು ಒಳಗೊಂಡ ಮೂರು ಪ್ರಮುಖ ಅಂಶಗಳು ಸುರಕ್ಷಿತ ಮತ್ತು ಸಮನ್ವಯ ಶಾಲೆಯನ್ನು ರೂಪಿಸಲು ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಯವರಿಗೆ ಅನುವು ಮಾಡಿ ಕೊಡುತ್ತವೆ.




**ಚಿತ್ರ 1. ಸಮನ್ವಯ ಮತ್ತು ಸುರಕ್ಷಿತ ಶಾಲೆಯ ಚೌಕಟ್ಟು**




**ಚಿತ್ರ 2. ಶಾಲೆಯಲ್ಲಿ ಸಮನ್ವಯತೆಯನ್ನು ಸಾಧಿಸಲು ಅನುಸರಿಸಬೇಕಾದ ಕ್ರಮಗಳು**

## 1. ಸಮಗ್ರ ಶಾಲಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು

ಶಾಲೆಗಳು ಮತ್ತು ಕಾಲೇಜುಗಳಲ್ಲಿ ನಾವು 'ಶೂನ್ಯ ಸಹಿಷ್ಣುತೆ' (zero tolerance) ಎಂಬ ಪದವನ್ನು ಎಷ್ಟು ಬಾರಿ ಕೇಳಿಸಿಕೊಳ್ಳುತ್ತೇವೆ? ಅದನ್ನು ಒಂದು ಧನಾತ್ಮಕ ನೀತಿಯನ್ನಾಗಿ ಹೇಗೆ ಜಾಹೀರುಪಡಿಸಲಾಗುತ್ತಿದೆ ಎಂಬುದನ್ನು ನೀವು ಗಮನಿಸಿದ್ದೀರಾ? ಶೂನ್ಯ ಸಹಿಷ್ಣುತೆಯು ಶಾಲೆಗಳಲ್ಲಿ ವಿದ್ಯಾರ್ಥಿಗಳ ದುರ್ವರ್ತನೆಗೆ ತೋರುವ ಪ್ರತಿಕ್ರಿಯೆಯಾಗಿದೆ. ಅಂದರೆ ಯಾವುದೇ ರೀತಿಯ ದುರ್ವರ್ತನೆಗೆ ಶಾಲೆಯು ವಿದ್ಯಾರ್ಥಿಗಳಿಗೆ ಕಠಿಣ ಶಿಕ್ಷೆಯನ್ನು ನೀಡುತ್ತದೆ. ಸಾಮಾನ್ಯವಾಗಿ ಇದು ಶಾಲೆಯಿಂದ ವಿದ್ಯಾರ್ಥಿಯ ಹೊರಹಾಕುವಿಕೆಯ ಮೂಲಕ ಕೊನೆಗೊಳ್ಳುತ್ತದೆ. ದುರ್ವರ್ತನೆಗೆ ನೀಡುವ ಇಂತಹ ಪ್ರತಿಕ್ರಿಯೆಯು ಶಾಲೆಯ ನೀತಿಯಾಗಿ ರೂಪುಗೊಂಡಾಗ ಶಾಲೆಯ ಸಿಬ್ಬಂದಿ, ಶಿಕ್ಷಕರು, ಪ್ರಾಂಶುಪಾಲರು ಮತ್ತು ಪೋಷಕರು ಸಹ ಇದನ್ನು ಅನುಸರಿಸುವ ಅಗತ್ಯತೆಯನ್ನು ಅರಿತುಕೊಳ್ಳುತ್ತಾರೆ ಹಾಗೂ ಈ ಕುರಿತು ಯಾವುದೇ ಪ್ರಶ್ನೆಯನ್ನು ಎತ್ತುವುದಿಲ್ಲ. ಶೂನ್ಯ ಸಹಿಷ್ಣುತೆಯ ಹಿಂದಿರುವ ಊಹೆ ಏನೆಂದರೆ, ತೊಂದರೆ ನೀಡುವ ವಿದ್ಯಾರ್ಥಿಗಳನ್ನು ಶಾಲೆಗಳಿಂದ ತೆಗೆದರೆ ಆ ಶಾಲೆಯು ಇತರರಿಗೆ ಸುರಕ್ಷಿತ ತಾಣವೆನಿಸುತ್ತದೆ ಎನ್ನುವುದು. ಆದರೆ ಈ ನೀತಿಯು ನಿಜವಾಗಿಯೂ ತನ್ನ ಗುರಿಗಳನ್ನು ಈಡೇರಿಸುತ್ತದೆಯೇ? ಈ ನೀತಿಯು ಶಾಲೆಗಳನ್ನು ಸುರಕ್ಷಿತ ತಾಣವನ್ನಾಗಿಸಲು ವಿಫಲವಾಗುತ್ತವೆ ಮಾತ್ರವಲ್ಲದೆ, ಶಾಲೆಯಿಂದ ಹೊರಬೀಳುವವರ ಸಂಖ್ಯೆ ಮತ್ತು ಸಮಸ್ಯಾತ್ಮಕ ವರ್ತನೆಯ ಘಟನೆಗಳು ಹೆಚ್ಚುತ್ತವೆ (ಫಾರ್‌ಬರ್‌ಮನ್, 2006). ಶಾಲಾ ಸಿಬ್ಬಂದಿಯಿಂದ ಹಿಡಿದು ಪೋಷಕರು ಹಾಗೂ ಸಮುದಾಯದ ತನಕ ಕಾಳಜಿಯ ವಿಷಯಗಳನ್ನು ಗುರುತಿಸಲು, ಸಂಪನ್ಮೂಲಗಳು ಮತ್ತು ಕೌಶಲ್ಯಗಳನ್ನು ಕಂಡುಹಿಡಿಯಲು, ಧನಾತ್ಮಕ ಬದಲಾವಣೆಗೆ ಯೋಜನೆ ರೂಪಿಸಲು ಮತ್ತು ಪ್ರಗತಿಯ ಮೌಲ್ಯಮಾಪನ ನಡೆಸಲು ಅನುವು ಮಾಡಿಕೊಡುವ ವ್ಯವಸ್ಥೆಗೆ ಹೆಚ್ಚಿನ ಗಮನ ನೀಡಬೇಕು.

ಮಧ್ಯಾಹ್ನದ ಬಿಸಿಯೂಟದ ವೇಳೆ ಕೆಲಸದ ವಿಂಗಡಣೆ ಅಥವಾ ಕ್ರೀಡಾಕೂಟದ ವೇಳೆ ತಂಡಗಳ ಆಯ್ಕೆ ಅಥವಾ ಆಸನದ ವ್ಯವಸ್ಥೆ ಇತ್ಯಾದಿ ಸಂದರ್ಭಗಳಲ್ಲಿ ತಾರತಮ್ಯಕ್ಕೆ ಕಾರಣವಾಗುವ ಶಾಲಾ ಅಭ್ಯಾಸಗಳತ್ತ ಗಮನ ಹರಿಸಬೇಕಾದುದು ಅಗತ್ಯ. ಇಂತಹ ಕಾಳಜಿಗಳನ್ನು ನೋಡಿಕೊಳ್ಳಲು ಪೋಷಕರ ಜೊತೆಗೂಡಿ ಅನೇಕ ಕ್ರಮಗಳನ್ನು ತೆಗೆದುಕೊಳ್ಳಬಹುದು.

### ಎ. ಸಮನ್ವಯಕ್ಕೆ ಸಿದ್ಧತೆ

ಶಾಲೆಯ ಎಲ್ಲಾ ಸದಸ್ಯರಿಂದ ಸಹಕಾರ ಪಡೆಯಬೇಕಾದರೆ ತುರ್ತು ಸನ್ನಿವೇಶವನ್ನು ರೂಪಿಸುವುದು ಅಗತ್ಯ. ರಾಷ್ಟ್ರೀಯ ಸಾಧನಾ ಅಧ್ಯಯನ (National Achievement Study-NAS)i ಅಥವಾ ಇತರ ಯಾವುದೇ ಬೃಹತ್ ಪ್ರಮಾಣದ ಅಧ್ಯಯನದ ಮಾಹಿತಿಯು, ಕಲಿಕಾ ಅಂತರ ಅಥವಾ ವಿದ್ಯಾರ್ಥಿಗಳು ಎದುರಿಸುವ ಕಲಿಕಾ ನಷ್ಟದ ಕುರಿತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿರಿಯ ಅಧಿಕಾರಿಗಳಿಗೆ ಸಹಾಯ ಮಾಡುತ್ತದೆ. ಇದೇ ರೀತಿ, ತುರ್ತು ಅಗತ್ಯತೆಯನ್ನು ರೂಪಿಸಲು, ವಿದ್ಯಾರ್ಥಿಗಳು ಹೇಗೆ ಮತ್ತು ಏಕೆ ಶಾಲೆ ಬಿಡುತ್ತಿದ್ದಾರೆ, ವಿದ್ಯಾರ್ಥಿಗಳ ಭಾವನಾತ್ಮಕ ಸ್ಥಿತಿ, ಶಿಕ್ಷಕರೊಂದಿಗೆ ಅವರು ಹೊಂದಿರುವ ಸಂಬಂಧ, ಇತ್ಯಾದಿಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಸಂಗ್ರಹಿಸಿ ಪ್ರಸ್ತುತಪಡಿಸಬಹುದು. ಈ ಪ್ರಕ್ರಿಯೆಯಲ್ಲಿ, ಸಂಬಂಧಪಟ್ಟ ಎಲ್ಲಾ ಸಹಭಾಗಿಗಳೊಂದಿಗೆ ಸೇರಿಕೊಂಡು ಒಂದು ತಂಡವನ್ನು ರೂಪಿಸಬಹುದು. ದೂರದೃಷ್ಟಿಯನ್ನು ಹೊಂದಿರುವವರು, ನಿರ್ಧಾರಗಳನ್ನು ತೆಗೆದುಕೊಂಡು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುವವರು, ಈ ವಿಷಯದಲ್ಲಿ ಜ್ಞಾನವನ್ನು ಹೊಂದಿರುವವರು ಮತ್ತು ಶಾಲೆಯಲ್ಲಿ ನಾಯಕತ್ವ ಹೊಂದಿರುವವರು ತಂಡದಲ್ಲಿರಬೇಕು.

### ಬಿ. ಬದಲಾವಣೆಗಳನ್ನು ಅನುಷ್ಠಾನಗೊಳಿಸುವುದು

ಇದನ್ನು ಜಾರಿಗೊಳಿಸುವುದರಲ್ಲಿ ಮೊದಲ ಮತ್ತು ಅತ್ಯಂತ ಪ್ರಮುಖ ಹೆಜ್ಜೆ ಎಂದರೆ ಯೋಜನೆಯ ದೂರದೃಷ್ಟಿಯನ್ನು ತಿಳಿ ಹೇಳುವುದು. ಸಮನ್ವಯದ ಪ್ರಸ್ತುತ ಮಟ್ಟ ಮತ್ತು ಬೆಳವಣಿಗೆಗೆ ಇರುವ ಅವಕಾಶಗಳು, ಬದಲಾವಣೆಗೆ ಇರುವ ಅಡ್ಡಿ ಆತಂಕಗಳನ್ನು ಅರಿತುಕೊಳ್ಳಲು ಶಾಲಾ ಪ್ರಾಂಶುಪಾಲರು ಮಾಡಿಕೊಳ್ಳುವ ಸ್ವಯಂ-ಮೌಲ್ಯಮಾಪನ ಸಾಧನದೊಂದಿಗೆ (self-assessment tool) ಆಧಾರಭೂತ ಅಧ್ಯಯನವು ಪ್ರಾರಂಭಗೊಳ್ಳುತ್ತದೆ. ಅಲ್ಲದೆ ಕ್ರಿಯಾ ಯೋಜನೆಯನ್ನು

ರೂಪಿಸಲು ಫಲಿತಾಂಶಗಳನ್ನು ಬಳಸಿಕೊಳ್ಳಬಹುದು. ಈ ಯೋಜನೆಯು, ಅಳೆಯಬಹುದಾದ ಉದ್ದೇಶಗಳು, ಈ ಉದ್ದೇಶಗಳನ್ನು ಸಾಧಿಸಲು ಮಾಡಬೇಕಾದ ಕಾರ್ಯಗಳು, ದತ್ತಾಂಶ ಸಂಗ್ರಹ ಸಾಧನಗಳು ಮತ್ತು ವಿಧಾನಗಳು, ಪ್ರತೀ ಉದ್ದೇಶದ ಪ್ರಗತಿ ಪರಿಶೀಲನೆ ಮತ್ತು ಪ್ರತಿ ಉದ್ದೇಶವನ್ನು ನೋಡಿಕೊಳ್ಳಲು ಜವಾಬ್ದಾರನಾಗಿರುವ ವ್ಯಕ್ತಿಯನ್ನು ಒಳಗೊಂಡಿರಬೇಕು. ಉದಾಹರಣೆಗೆ, ಸಹಕಾರಿ ಬೋಧನೆ ಮತ್ತು ಯೋಜನೆಯನ್ನು ಖಾತರಿಪಡಿಸುವುದು ಉದ್ದೇಶವಾಗಿದ್ದರೆ, ಆ ಉದ್ದೇಶವು ಈ ರೀತಿ ಇರಬಹುದು: ವಿದ್ಯಾರ್ಥಿಗಳ ಅಗತ್ಯತೆಯನ್ನು ಈಡೇರಿಸುವುದಕ್ಕಾಗಿ ವಿತರಣೆಯ ವಿವಿಧ ಮಾದರಿಗಳನ್ನು ಬಳಸುವುದು ಮತ್ತು ವಿವಿಧ ವಿದ್ಯಾರ್ಥಿಗಳಿಗಾಗಿ, ಬೋಧನೆಯ ಕಾರ್ಯತಂತ್ರಗಳ ಕುರಿತು ವೃತ್ತಿಪರ ಅಭಿವೃದ್ಧಿ ಅವಕಾಶಗಳನ್ನು ದೊರೆಯುವಂತೆ ಮಾಡುವುದು. ಅಲ್ಪಕಾಲೀನ ಗೆಲುವುಗಳು, ಗುರಿಯನ್ನು ಸಾಧಿಸುವತ್ತ ಉತ್ಸಾಹದಿಂದ ಕೆಲಸ ಮಾಡಲು ಜನರನ್ನು ಉತ್ತೇಜಿಸಬಹುದು ಹಾಗೂ ಮುಂದಿನ ಬೃಹತ್ ಗೆಲುವಿಗೆ ದಾಟುಗಲ್ಲು ಎನಿಸಬಹುದು.

### ಸಿ. ಸಮನ್ವಯವನ್ನು ಸುಸ್ಥಿರಗೊಳಿಸುವುದು

ಸಮನ್ವಯವನ್ನು ಸುಸ್ಥಿರಗೊಳಿಸಲು ಇರುವ ಪ್ರಮುಖ ಹೆಜ್ಜೆ ಎಂದರೆ, ಯೋಜನೆಯ ಕುರಿತು ಮಾಡಿದ ಕೆಲಸದ ಕುರಿತು ಪರ್ಯಾಲೋಚನೆ ನಡೆಸುವುದು ಮತ್ತು ಯಾವುದು ಕೆಲಸ ಮಾಡುತ್ತದೆ ಮತ್ತು ಯಾವುದು ಕೆಲಸ ಮಾಡುವುದಿಲ್ಲ ಎನ್ನುವುದನ್ನು ಗುರುತಿಸುವುದು. ಸುಧಾರಣೆಗಳನ್ನು ತರುವುದಕ್ಕಾಗಿ ಈ ಮಾಹಿತಿಯನ್ನು ಬಳಸಿಕೊಳ್ಳಬಹುದು. ಕಾಲ ಕಳೆದಂತೆ, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ಹಂಚಿಕೆ ಮತ್ತು ಓದುವಿಕೆಯ ಮೂಲಕ ತಂಡದ ವೃತ್ತಿಪರ ಕಲಿಕೆಯು ಪ್ರಾರಂಭಗೊಳ್ಳುತ್ತದೆ. ಪ್ರತಿ ಶಿಕ್ಷಕ ಮತ್ತು ಶಾಲೆಯ ಇತರ ಸಿಬ್ಬಂದಿಯ ವೃತ್ತಿಪರ ಅಗತ್ಯತೆಗಳನ್ನು ಗುರುತಿಸುವುದರಿಂದ ಪರಿಣಾಮಕಾರಿ ವೃತ್ತಿಪರ ಬೆಳವಣಿಗೆ ಚಟುವಟಿಕೆಗಳನ್ನು ಸಂಯೋಜಿಸಲು ನೆರವಾಗುತ್ತದೆ. ಬದಲಾವಣೆಗಳ ದಾಖಲೀಕರಣವು ಶಾಲಾ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳಿಗೆ ಮಾರ್ಗದರ್ಶನ ನೀಡುತ್ತದೆ. ಶಾಲೆಯಲ್ಲಿ ಸಮನ್ವಯವನ್ನು ಉಳಿಸಿಕೊಳ್ಳಬೇಕಾದರೆ, ತರಗತಿ ಕೋಣೆಯ ಒಳಗಿನ ಬೋಧನೆ – ಕಲಿಕೆ ಪ್ರಕ್ರಿಯೆಯಂತೆಯೇ ಆಡಳಿತಾತ್ಮಕ ಪಾಲ್ಗೊಳ್ಳುವಿಕೆ ಮತ್ತು ಬೆಂಬಲವು ಅಗತ್ಯ.

### 2. ತರಗತಿಯ ಒಳಗೂ ಹೊರಗೂ ಸಮಾಜೋ-ಭಾವನಾತ್ಮಕ ಕಲಿಕೆಯನ್ನು ಪೋಷಿಸುವುದು

ಕಲಿಕೆಯು ಕೇವಲ ತರಗತಿ ಕೋಣೆಯ ಔಪಚಾರಿಕ ವ್ಯವಸ್ಥೆಯಲ್ಲಿ ಉಂಟಾಗುವುದಿಲ್ಲ ಎನ್ನುವುದು ನಮಗೆ ತಿಳಿದಿದೆ. ಅದು ಆಟದ ಮೈದಾನ, ಮಧ್ಯಾಹ್ನದ ಊಟದ ವೇಳೆ ಮತ್ತು ಬೆಳಗ್ಗಿನ ಸಭೆ, ಕಾರಿಡಾರುಗಳು, ಗ್ರಂಥಾಲಯ ಇತ್ಯಾದಿಗಳಲ್ಲಿ ಉಂಟಾಗುತ್ತದೆ. ಅದನ್ನು ಶಾಲೆಯ ಪಠ್ಯಕ್ರಮದ ಒಳಗೆ ಒತ್ತಾಯಪೂರ್ವಕವಾಗಿ ತುರುಕಲಾಗದು. ಮಕ್ಕಳಲ್ಲಿ ಸಾಮಾಜಿಕ – ಭಾವನಾತ್ಮಕ ಕಲಿಕೆ (socio-emotional learning -SEL)ಯನ್ನು ಪೋಷಿಸುವಲ್ಲಿ ಶಾಲೆಗಳು ಪ್ರಮುಖ ಕೇಂದ್ರಗಳಾಗಿವೆ ಎಂದು ಭಾವಿಸಿದಲ್ಲಿ ಆ ಕಲಿಕೆ ರಚನಾತ್ಮಕವಾದುದು ಮತ್ತು ವೈಯಕ್ತಿಕ ಮಟ್ಟದ್ದು ಎಂಬುದನ್ನು ನಾವು ಅರಿತಿರಬೇಕಾಗುತ್ತದೆ. ಸಾಮಾಜಿಕ – ಭಾವನಾತ್ಮಕ ಕಲಿಕೆಯನ್ನು ವಿಷಯದ ಕ್ಷೇತ್ರಗಳೊಳಗೆ ಹೆಣೆಯಲಾಗಿದ್ದು, ಪಠ್ಯಕ್ರಮದ ಕುರಿತು ವ್ಯವಹರಿಸುವಾಗ ಅದನ್ನು ಕಲಿಸಬಹುದು ಎಂದು ಕೆಲವರು ನಂಬಿದ್ದಾರೆ. ದಿನನಿತ್ಯದ ಅನುಭವಗಳು, ನಿರಂತರ ಸಂವಾದಗಳು ಮತ್ತು ಸಂಬಂಧಗಳ ಮೂಲಕ ಅಗತ್ಯವಿರುವ ಎಲ್ಲಾ ಕೌಶಲ್ಯಗಳನ್ನು ನೇರವಾಗಿ ಕಲಿಯಲು ಸಾಧ್ಯವಿರುವುದರಿಂದ ಪ್ರತ್ಯೇಕ ಕಾರ್ಯಕ್ರಮದ ಅಗತ್ಯವಿಲ್ಲ ಎಂದು ನಂಬಲಾಗಿದೆ. ಆದರೆ ಅಂತಹ ಬೋಧನೆಗಳು ಚಾಲ್ತಿಯಲ್ಲಿರುವ ಶಾಲಾ ಪಠ್ಯಕ್ರಮದೊಳಗೆ ಪರಿಣಾಮಕಾರಿ ಎನಿಸಬೇಕಾದರೆ ಅಂತಹ ಬೋಧನೆಗಳಿಗೆ ಬೆಂಬಲ ನೀಡುವಂತಹ ಪರಿಸರವನ್ನು ಕಲ್ಪಿಸುವುದು ಅಗತ್ಯ. ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಬೆಂಬಲ ಒದಗಿಸುವ ಪರಿಸರ ಇಲ್ಲದೆ ಹೋದಲ್ಲಿ ಶಾಲಾ ಪಠ್ಯಕ್ರಮವು ಖಾಲಿ ಎನಿಸುತ್ತದೆ ಹಾಗೂ ಮಕ್ಕಳ ಬೆಳವಣಿಗೆಯಲ್ಲಿ ಅದು ಯಾವುದೇ ಗಣನೀಯ ಪರಿಣಾಮವನ್ನುಂಟು ಮಾಡುವುದಿಲ್ಲ.ನನ್ನ ಅನುಭವದ ಪ್ರಕಾರ, ಸಾಮಾಜಿಕ – ಭಾವನಾತ್ಮಕ ಕಲಿಕೆಗಾಗಿ ನಡೆಸುವ ವಿಶೇಷ ತರಗತಿಗಳು, ದಿನನಿತ್ಯದ ಬೋಧನಾ ಅಭ್ಯಾಸದಲ್ಲಿ ಬಳಸುವ ಸಮಗ್ರ ವಿಧಾನದಷ್ಟು ಪರಿಣಾಮಕಾರಿ ಎನಿಸುವುದಿಲ್ಲ. ಮಕ್ಕಳಿಗೆ ತಮ್ಮನ್ನು ತಾವು ವ್ಯಕ್ತಪಡಿಸಲು, ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ತರಗತಿಯ ನಿರ್ಧಾರಗಳಲ್ಲಿ ಪಾಲ್ಗೊಳ್ಳಲು ಅವಕಾಶ ಒದಗಿಸುವ ಶಿಕ್ಷಕರು, ಹೇಳಲಾದ ಕಲಿಕಾ ಫಲಿತಾಂಶಗಳನ್ನು ಪಡೆಯಲು ಅವರಿಗೆ ಸಹಾಯ ಮಾಡುತ್ತಾರೆ ಮಾತ್ರವಲ್ಲದೆ ಸಹಯೋಗ, ನೈತಿಕ ನಿರ್ಧಾರ ತೆಗೆದುಕೊಳ್ಳುವುದು, ಸಮಸ್ಯೆಗಳನ್ನು ಬಗೆಹರಿಸುವುದು ಮುಂತಾದ ಸಾಮಾಜಿಕ – ಭಾವನಾತ್ಮಕ ಕೌಶಲ್ಯಗಳನ್ನು ಬೆಳೆಸಲು ಸಹ ಅಂತಹ ಶಿಕ್ಷಕರು ತಮ್ಮ ಸಹಯೋಗವನ್ನು ನೀಡುತ್ತಾರೆ. ಶಿಕ್ಷಕರು ಒಂದಷ್ಟು ವಿದ್ಯಾರ್ಥಿಗಳಿಗೆ ಈ ಪ್ರಶ್ನೆಯನ್ನು ಕೇಳಿ ಉತ್ತರಿಸುವಂತೆ ಹೇಳಬಹುದು: 'ನಾನು ನಿಮ್ಮ ಪ್ರಶ್ನೆಗಳನ್ನು ಕೇಳಿದ್ದೇನೆ ಎಂಬುದನ್ನು ಖಚಿತಪಡಿಸಲು ನಾನೇನು ಮಾಡಬೇಕು ಎಂದು ನೀವು ಭಾವಿಸುತ್ತೀರಿ?' ವಿದ್ಯಾರ್ಥಿಗಳು ಈ ಕುರಿತು ಚರ್ಚೆ ನಡೆಸುತ್ತಿರುವುದರ ಜೊತೆಗೆ, ಅವರು ಯಾವ ವಿಧಾನವು ನ್ಯಾಯಯುತವಾಗಿದೆ ಮತ್ತು ಯಾರ ಭಾವನೆಯನ್ನೂ ಘಾಸಿಗೊಳಿಸುವುದಿಲ್ಲ ಎಂಬುದನ್ನು ಸಹ ಚರ್ಚಿಸುತ್ತಾರೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಒಮ್ಮತದಿಂದ ಒಂದು ವಿಧಾನವನ್ನು ನಿರ್ಧರಿಸಿ ಅದನ್ನು ಅನುಸರಿಸುತ್ತಾರೆ. ಇನ್ನೊಬ್ಬ ಶಿಕ್ಷಕರು ತರಗತಿ ಕೋಣೆಗೆ ಬರುತ್ತಾರೆ ಮತ್ತು ತರಗತಿಯ ಒಳಗೆ ಅನುಸರಿಸಬೇಕಾದ ನಿಯಮಾವಳಿಯ ಕುರಿತು ಜ್ಞಾಪಿಸುತ್ತಾರೆ. ಎರಡೂ ಅಭ್ಯಾಸಗಳು ನಿರೀಕ್ಷಿತ

ವರ್ತನೆಯನ್ನು ತಿಳಿಸುತ್ತವೆ. ಆದರೆ ಮೊದಲ ಶಿಕ್ಷಕರು, ಮಕ್ಕಳ ಭಾವನೆಯ ಕುರಿತು ಕಾಳಜಿ ತೋರಿಸಿ, ತರಗತಿಗಾಗಿ ನಿಯಮಗಳನ್ನು ನಿರ್ಧರಿಸುವ ಅವಕಾಶವನ್ನು ಒದಗಿಸಿ ಅವರಿಗೆ ಗೌರವವನ್ನು ಸೂಚಿಸಿದರು. ಈ ವಿಧಾನವು, ಮಕ್ಕಳಿಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡದ, ನಿಯಮಗಳನ್ನು ಘೋಷಿಸಿ ಜ್ಞಾಪಿಸುವ ಸಾಂಪ್ರದಾಯಿಕ ವಿಧಾನಕ್ಕಿಂತ ಹೆಚ್ಚು ಪರಿಣಾಮಕಾರಿ ಎನಿಸಿದೆ. ಎರಡೂ ತಂಡಗಳು ಒಂದೇ ಪ್ರಕ್ರಿಯೆಯನ್ನು ಅನುಸರಿಸಬಹುದು. ಆದರೆ ಮೊದಲನೆಯ ವಿಧಾನವು ಮಕ್ಕಳಲ್ಲಿ ಜವಾಬ್ದಾರಿಯ ಪ್ರಜ್ಞೆಯನ್ನು ರೂಪಿಸುತ್ತದೆ.

ಸುರಕ್ಷಿತ ಮತ್ತು ಸಮನ್ವಯ ತರಗತಿ ಕೊಠಡಿಯ ಅಭಿವೃದ್ಧಿಗೊಳಿಸುವಿಕೆಯು ಮಕ್ಕಳಿಗೆ ಅಪಾಯವನ್ನು ಸ್ವೀಕರಿಸಲು ಅಥವಾ ಶಿಕ್ಷೆ ಅಥವಾ ಅವಮಾನದ ಯಾವುದೇ ಭೀತಿ ಇಲ್ಲದೆ ತಪ್ಪುಗಳನ್ನು ಮಾಡಲು ಸಹಾಯ ಮಾಡುತ್ತದೆ. ತರಗತಿ ನಡೆಯುವಾಗ ಶಿಕ್ಷಕರು ತಮ್ಮ ವೈಯಕ್ತಿಕ ಕಥನ ಅಥವಾ ವೈಯಕ್ತಿಕ ಅನುಭವದ ಮೂಲಕ ತಮ್ಮ ನೋವಿನ ಮಗ್ಗುಲನ್ನು ತೋರಿಸಿದಾಗ ಅಥವಾ ತಮ್ಮದೇ ಆದ ಭಾವನೆಗಳನ್ನು ಪ್ರದರ್ಶಿಸಿದಾಗ, ಅದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಬಂಧವನ್ನು ಗಟ್ಟಿಗೊಳಿಸುತ್ತದೆ. ಇದು ಧನಾತ್ಮಕ ಸಾಮಾಜಿಕ – ಭಾವನಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅವಶ್ಯಕ. ಎಳೆಯ ಮಕ್ಕಳು ತಮ್ಮ ಶಿಕ್ಷಕರ ಬಾಲ್ಯದ ಕಥೆಗಳನ್ನು ಕೇಳಲು ಹೆಚ್ಚು ಆಸಕ್ತರಾಗಿರುತ್ತಾರೆ.

ಸಾಮುದಾಯಿಕ ಪ್ರಜ್ಞೆಯನ್ನು ರೂಪಿಸುವಲ್ಲಿ, ಎಳೆಯ ಮಕ್ಕಳು ವೃತ್ತಾಕಾರದಲ್ಲಿ ಕುಳಿತು ಕಳೆಯುವ ವಿವಿಧ ಚರ್ಚೆ ಅಥವಾ ಗುಂಪು ಚಟುವಟಿಕೆಗಳಲ್ಲಿ ಕಳೆಯುವ ಆ ಸಮಯವು ತುಂಬಾ ಪರಿಣಾಮಕಾರಿ ಬೋಧನಾ ವಿಧಾನದ ಸಾಧನವೆನಿಸುತ್ತದೆ. ಈ ಚಟುವಟಿಕೆಯು, ಆ ದಿನಕ್ಕೆ ಸಿದ್ಧತೆ ನಡೆಸಲು ಮತ್ತು ಕಲಿಯಲು ಮಕ್ಕಳಿಗೆ ಅನುವು ಮಾಡಿಕೊಡುತ್ತದೆ. ಮನೆಯಲ್ಲಿ ತಮ್ಮ ಕಾಳಜಿ ಅಥವಾ ಭಾವನೆಗಳನ್ನು ವ್ಯಕ್ತಪಡಿಸಲು ಮಕ್ಕಳು ಅವಕಾಶವನ್ನು ಪಡೆಯದ ಸನ್ನಿವೇಶದಲ್ಲಿ ಅವರು ಶಾಲಾ ವಾತಾವರಣದಲ್ಲಿ ಸಮನ್ವಯ ಭಾವವನ್ನು ಅನುಭವಿಸಬಹುದು. ಮಾಹಿತಿಯು ತರಗತಿ ಕೋಣೆಯ ಹೊರಗೆ ಹೋಗದಂತೆ ನೋಡಿಕೊಳ್ಳುವ ಸಲುವಾಗಿ ಹಾಗೂ ಪರಸ್ಪರರನ್ನು ಗೌರವಿಸುವ ಸಲುವಾಗಿ ಒಂದು ನಿಯಮಾವಳಿಯನ್ನು ಅನುಸರಿಸುವುದು (ವಿದ್ಯಾರ್ಥಿಗಳ ಸಹಯೋಗದಿಂದ ನಿರ್ಧರಿಸಿದ) ಅಗತ್ಯ.

## 3. ಕಲಿಕಾ ಸಮುದಾಯಗಳನ್ನು ರೂಪಿಸುವುದು

ಕಲಿಕಾ ಸಮುದಾಯಗಳು ವ್ಯಕ್ತಿಗಳ ಒಂದು ಗುಂಪಾಗಿದ್ದು, ಇಲ್ಲಿ ವ್ಯಕ್ತಿಗಳು ತಮ್ಮ ಕೆಲಸ, ಕಲಿಕೆ, ಪರ್ಯಾಲೋಚನೆ ಮತ್ತು ಸಲಹೆಗಳನ್ನು ಹಂಚಿಕೊಳ್ಳುವುದಕ್ಕಾಗಿ ನಿಯಮಿತವಾಗಿ ಒಗ್ಗೂಡುತ್ತಾರೆ. ಯಶಸ್ವೀ ಅಭ್ಯಾಸಗಳನ್ನು ಹಂಚಿಕೊಳ್ಳುವುದಕ್ಕಾಗಿ ಒಂದು ವೇದಿಕೆಯನ್ನು ರೂಪಿಸಿದರೆ, ಸಾಮಾಜಿಕ – ಭಾವನಾತ್ಮಕ ಕಲಿಕೆಯ ಅಭ್ಯಾಸಗಳನ್ನು ಚಾಲ್ತಿಯಲ್ಲಿರುವ ಪ್ರಕ್ರಿಯೆಗಳಲ್ಲಿ ಸಂಯೋಜಿಸಲು, ಸಮಸ್ಯೆಗಳನ್ನು ಗುರುತಿಸಲು ಮತ್ತು ಬಗೆಹರಿಸಲು ಅಂತಹ ವೇದಿಕೆ ಸಹಕಾರಿ ಎನಿಸುತ್ತದೆ. ಕಲಿಕಾ ಸಮುದಾಯಗಳನ್ನು ರೂಪಿಸಲು ಇರುವ ಕೆಲವು ವಿಧಾನಗಳೆಂದರೆ:

ವಿದ್ಯಾರ್ಥಿ–ಶಿಕ್ಷಕರ ಸಂಬಂಧವನ್ನು ಹೇಗೆ ಸುಧಾರಿಸಬೇಕು ಇತ್ಯಾದಿ ನಿರ್ದಿಷ್ಟ ಸಾಮಾಜಿಕ – ಭಾವನಾತ್ಮಕ ಕಲಿಕಾ ವಿಷಯಗಳ ಕುರಿತು ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಯವರ ಎಲ್ಲಾ ಧ್ವನಿಯನ್ನು ಒಳಗೊಳ್ಳುವ ಸಂವಾದಗಳು. ಇದು ಗಮನ ಕೇಂದ್ರೀಕೃತ ಚರ್ಚೆಗಳ (focused group discussions) ನಿಯಮಗಳನ್ನು ಅನುಸರಿಸಬಹುದು.

ಅಧ್ಯಯನ ಗುಂಪುಗಳು – ಇದರಲ್ಲಿ ಶಿಕ್ಷಕರು ಸಾಮಾಜಿಕ – ಭಾವನಾತ್ಮಕ ಕಲಿಕೆಗೆ ಸಂಬಂಧಿತ ಪಠ್ಯಗಳು, ಸಾಮಗ್ರಿಗಳು ಮತ್ತು ಸಂಶೋಧನೆಯನ್ನು ಓದುತ್ತಾರೆ.

ಸಾಮಾಜಿಕ – ಭಾವನಾತ್ಮಕ ಕಲಿಕೆ ಸಂಬಂಧಿತ ಚಟುವಟಿಕೆಗಳ ಪರಿಣಾಮಗಳ ಕುರಿತು ಪರ್ಯಾಲೋಚನೆ ನಡೆಸುವ ಕ್ರಿಯಾ ಸಂಶೋಧನಾ ಗುಂಪುಗಳು (Action research groups). ಇದು ತಳ ಮಟ್ಟದಲ್ಲಿ ಮಾಡಿದ ಕೆಲಸದ ಪರಿಣಾಮದ ಕುರಿತು ಸಂಶೋಧನೆಯನ್ನು ನಡೆಸಬಹುದು ಮತ್ತು ಪರ್ಯಾ–ಲೋಚನೆಯ ಆಧಾರದ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬಹುದು.

ಸಾಮಾಜಿಕ – ಭಾವನಾತ್ಮಕ ಕಲಿಕೆಗೆ ಸಂಬಂಧಿಸಿದ ಬೋಧನಾ ಅಭ್ಯಾಸಗಳ ಕುರಿತು ವಾಟ್ಸಪ್, ಚರ್ಚಾ ವೇದಿಕೆಗಳು, ಕಾನ್ಫರೆನ್ಸ್ ಕರೆಗಳು, ವೀಡಿಯೋ ಕರೆಗಳು ಇತ್ಯಾದಿ ಆನ್‌ಲೈನ್ ಸಂವಹನ ವೇದಿಕೆಗಳು.

ಶಿಕ್ಷಕರ ಸಮುದಾಯದಲ್ಲಿ, ಶಿಕ್ಷಕರ ಲೇಖನಗಳನ್ನು ಹೊಂದಿರುವ ಕಲಿಕಾ ನಿಯತಕಾಲಿಕವನ್ನು ಪ್ರಕಟಿಸಬಹುದು ಮತ್ತು ಪ್ರಸಾರ ಮಾಡಬಹುದು.

## ಉಪಸಂಹಾರ:

ಭೌತಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸುರಕ್ಷಿತವೆನಿಸುವ ಭಾವನೆಯನ್ನು ಮಕ್ಕಳಲ್ಲಿ ಉತ್ತೇಜಿಸಿದರೆ ಅದು ವಿದ್ಯಾರ್ಥಿಗಳ ಕಲಿಕೆ ಮತ್ತು ಆರೋಗ್ಯದಾಯಕ ಬೆಳವಣಿಗೆಯನ್ನು ವೃದ್ಧಿಸುತ್ತದೆ. ಈ ಗುರಿಯನ್ನು ಗಟ್ಟಿಗೊಳಿಸಲು ಸರಣಿ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕ. ವ್ಯವಸ್ಥಿತ ಮಧ್ಯಸ್ಥಿಕೆ ಮತ್ತು ಪ್ರಕ್ರಿಯೆಗಳು ಸುರಕ್ಷಿತ ಶಾಲೆಗಳಿಗೆ ಬುನಾದಿಯನ್ನು ರೂಪಿಸುತ್ತವೆ. ಸುರಕ್ಷಿತವೆಂದು ಭಾವಿಸುವ ಸಾಮಾಜಿಕ ಮತ್ತು ಭಾವನಾತ್ಮಕ ಆಯಾಮಗಳು ಪರಸ್ಪರ ಪ್ರಭಾವ ಬೀರುತ್ತದೆ. ಬೆದರಿಸುವಂತಹ ಸಾಮಾಜಿಕ ಅನುಭವಗಳು, ಇನ್ನೊಮ್ಮೆ ಬೆದರಿಕೆಗೆ ಒಳಗಾಗುವ ಭೀತಿಯಿಂದ

ಒತ್ತಡವನ್ನುಂಟು ಮಾಡುತ್ತವೆ. ಭೌತಿಕ ಮೂಲಸೌಕರ್ಯಗಳು ಸಹ, ಯಾವ ರೀತಿಯ ವರ್ತನೆಯನ್ನು ನಿರೀಕ್ಷಿಸಲಾಗುತ್ತಿದೆ ಎಂಬ ಕುರಿತು ಸೂಕ್ಷ್ಮ ಸಂದೇಶವನ್ನು ರವಾನಿಸುತ್ತವೆ. ಉದಾಹರಣೆಗೆ, ಅನೇಕ ಕಾರಣಗಳಗಾಗಿ ಶಾಲಾ ಲೋಹಶೋಧಕಗಳು (metal detectors) ಅಗತ್ಯ ಸಾಧನಗಳೆನಿಸಬಹುದು. ಆದರೆ ಹಿಂಸೆಯು ಸಹಜವಾದುದು ಹಾಗೂ ಇದು ಯಾವುದೇ ಸಂದರ್ಭದಲ್ಲಿಯೂ ಉಂಟಾಗ–ಬಹುದು ಎಂಬ ಸಂದೇಶವನ್ನು ರವಾನಿಸಬಹುದು. ಅಥವಾ, ಲಿಂಗ ಆಧಾರಿತ ಆಸನ ವ್ಯವಸ್ಥೆಯು, ಹುಡುಗರು ಮತ್ತು ಹುಡುಗಿಯರು ಭಿನ್ನತೆಯನ್ನು ಹೊಂದಿದ್ದು ಅವರು ಪರಸ್ಪರ ಬೆರೆಯಲು ಅವಕಾಶ ನೀಡಬಾರದು ಎನ್ನುವ ಸಂದೇಶವನ್ನು ನೀಡಬಹುದು. ಶಾಲೆಯಲ್ಲಿ ಶಿಕ್ಷಕರು ಸುರಕ್ಷತೆಯ ಭಾವನೆಯನ್ನು ಹೊಂದುವಂತೆ ಮಾಡುವ ಒಂದು ಪ್ರಮುಖ ಅಂಶವೆಂದರೆ, ಶಾಲೆಗೆ ಮೊದಲು, ಶಾಲೆಯ ವೇಳೆಯಲ್ಲಿ ಅಥವಾ ಶಾಲಾ ನಂತರ ಯಾವಾಗ ಬೇಕಾದರೂ ಹೋಗಬಹುದಾದ ಸ್ಥಳಾವಕಾಶದ ನಿರ್ಮಾಣ. ಆ ಸ್ಥಳಾವಕಾಶವು ಭೌತಿಕ ಸ್ಥಳವೇ ಆಗಿರಬೇಕು ಎಂದೇನಿಲ್ಲ. ಅದು ಒಬ್ಬ ವಿಶ್ವಾಸಾರ್ಹ ವ್ಯಕ್ತಿಯೂ ಆಗಿರಬಹುದು.

ವಿದ್ಯಾರ್ಥಿಗಳಗಾಗಿ ಪ್ರತ್ಯೇಕ ಸಾಮಾಜಿಕ – ಭಾವನಾತ್ಮಕ ಕಲಿಕೆಯ ಕೋರ್ಸ್ ಅಥವಾ ಕಾರ್ಯಕ್ರಮವನ್ನು ರೂಪಿಸುವುದು ಯಾವುದೇ ಶಿಕ್ಷಕರ ಪಾಲಿಗೆ ಪ್ರಾಯೋಗಿಕ–ವೆನಿಸದು. ಅದನ್ನು ಸುಲಭವಾಗಿ ಶಾಲಾ ಬದುಕಿನ ಶೈಕ್ಷಣಿಕ ಮತ್ತು ಶೈಕ್ಷಣಿಕವಲ್ಲದ ವಿಷಯಗಳೊಂದಿಗೆ ಸಂಯೋಜಿಸ–ಬಹುದು. ಸಾಮಾಜಿಕ – ಭಾವನಾತ್ಮಕ ಕಲಿಕೆಯನ್ನು ಬೋಧನೆ – ಕಲಿಕೆ ಪ್ರಕ್ರಿಯೆ, ಕ್ರೀಡೆ, ವಿರಾಮ, ಅಸೆಂಬ್ಲಿ ಇತ್ಯಾದಿ ಶಾಲಾ ಅಭ್ಯಾಸಗಳೊಂದಿಗೆ ಹೇಗೆ ಸಂಯೋಜಿಸುವುದು ಎಂಬ ಕುರಿತು ತರಗತಿಗೆ ಅನ್ವಯಿಸಬಹುದಾದ ಅನೇಕ ಆನ್‌ಲೈನ್ ಸಂಪನ್ಮೂಲಗಳು ಲಭ್ಯವಿವೆ.

**ಕೊನೆ ಟಿಪ್ಪಣಿಗಳು**

i ರಾಷ್ಟ್ರೀಯ ಸಾಧನಾ ಸಮೀಕ್ಷೆ (National Achievement Survey -NAS) ಎನ್ನುವುದು ವಿದ್ಯಾರ್ಥಿಗಳ ಕಲಿಕೆಯ ಕುರಿತು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಕೈಗೊಂಡ ಬೃಹತ್‌ನಾಪ್ರಮಾಣದ ಸಮೀಕ್ಷೆಯಾಗಿದೆ

**ಪರಾಮರ್ಶನ**


Central Board of Secondary Education. (2012). *Value Education: A Handbook for Teachers*. New Delhi: CBSE

Devine, J., & Cohen, J. (2007). *Making Your School Safe: Strategies to Protect Children and Promote Learning*. New York: Teachers College Press

Farberman, R. (2006, October). *Zero Tolerance Policies can have Unintended Effects, APA report finds*. Retrieved from the American Psychological Association: https://www.apa.org/monitor/oct06/tolerance

NCERT. (n.d.). *Index for Inclusive Schools*. New Delhi: NCERT





**ಪ್ರಣಾಲೀ ಶರ್ಮ** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಂಟಿನ್ಯುಯಿಂಗ್ ಎಜುಕೇಶನ್‌ನಲ್ಲಿ ಬೋಧಕ ಸಿಬ್ಬಂದಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ದೆಹಲಿ ವಿಶ್ವವಿದ್ಯಾಲಯದಿಂದ ಮಾನವ ಅಭಿವೃದ್ಧಿ ಮತ್ತು ಬಾಲ್ಯಕಾಲದ ಅಧ್ಯಯನ ವಿಷಯದಲ್ಲಿ ಪಿ.ಹೆಚ್.ಡಿ ಪದವಿ ಪಡೆದಿದ್ದಾರೆ. ಅವರ ಸಂಶೋಧನಾಸಕ್ತಿಯ ವಿಷಯಗಳೆಂದರೆ ಸಾಮಾಜಿಕ – ಭಾವನಾತ್ಮಕ ಕಲಿಕೆ ಮತ್ತು ಮಗುವಿನ ಅಭಿವೃದ್ಧಿ. ಅವರು ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ ಸಾಮಾಜಿಕ – ಭಾವನಾತ್ಮಕ ಮತ್ತು ಮೌಲ್ಯಮಾಪನ ಚೌಕಟ್ಟುಗಳ ಮಾದರಿಗಳ ಮೇಲೆ ಪ್ರಿಸ್ಕೂಲ್ಪಠ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ನಿರತರಾಗಿದ್ದಾರೆ. ಅವರನ್ನು pranalee.sharma@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲನೆ: **ಟಿ.ಎನ್.ವಾಸುದೇವಮೂರ್ತಿ**